ಅಸಲು ದಾವಾ ಸಂಖ್ಯೆ 139/2020

ಪಿ.**ಡಬ್ಲ್ಯು**:1

**ದಿನಾಂಕ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು : ಶ್ರೀ .ಎ.ಎಂ.ಆರ್. ವಾದಿ ಪರ ವಕೀಲರಿಂದಃ–**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ತಂದೆಗೆ ಬಳಿಗನೂರು ಗ್ರಾಮದಲ್ಲಿ ಸ.ನಂ.34/3 ಬಿ ರಲ್ಲಿ 2 ಎಕರೆ 8 ಗುಂಟೆ ಜಮೀನು ಇತ್ತು ಎಂದರೆ ಸರಿ. ನನ್ನ ತಂದೆ ಮರಣಾ ನಂತರ ಸದರಿ ಸ್ವತ್ತು ನನ್ನ ತಾಯಿಗೆ ಪೌತಿ ವಾರಸು ಮೂಲಕ ಬಂದಿದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ನನ್ನ ತಾಯಿ ಮತ್ತು 3 ಜನ ಮಕ್ಕಳಿಗೆ ಭಾಗಾಂಶದ ಹಕ್ಕಿತ್ತು ಎಂದರೆ ಸರಿಯಲ್ಲ. ಅದರಂತೆ ತಲಾ 0.20 ಗುಂಟೆ ಸ್ವತ್ತಿಗೆ ಅರ್ಹರಿದ್ದರು ಎಂದರೆ ಸರಿಯಲ್ಲ.

1 ನೇ ವಾದಿಯನ್ನು 2000 ನೇ ಇಸವಿಯಲ್ಲಿ ವಿವಾಹ ಮಾಡಿಕೊಡಲಾಗಿತ್ತು ಎಂದರೆ ಸರಿ. ನನ್ನ ತಂದೆ ಮರಣಾ ನಂತರ ಸದರಿ ಸ್ವತ್ತನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದೇನೆ ಎಂದರೆ ಸರಿ. ನನ್ನ ತಾಯಿ ಪಡೆದಂತಹ ಹಿಸ್ಸೆಯನ್ನು ಹಣದ ಅವಶ್ಯಕತೆಗಾಗಿ 1 ನೇ ವಾದಿಗೆ ಕರಾರು ಮಾಡಿ ರೂ.1,58,000/- ಹಣವನ್ನು ಸಾಲವಾಗಿ ಪೆಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ಕ್ರಯದ ಕರಾರು ಪತ್ರವನ್ನು ತೋರಿಸಿ, ಅದರಲ್ಲಿರುವ ಸಹಿ ಪ್ರತಿವಾದಿಯದ್ದು ಎಂಬ ಸೂಚನೆಯನ್ನು ಸಾಕ್ಷಿಯು ನಿರಾಕರಿಸಿದರು.

ದಿಃ 09-07-2015 ರಂದು 1 ನೇ ವಾದಿಯು ಪ್ರತಿವಾದಿಗೆ ತನ್ನ ವಕೀಲರ ಮೂಲಕ ನೋಟಿಸು ಕಳುಹಿಸಿದ್ದರು ಎಂದರೆ ಸರಿಯಲ್ಲ. ಸದರಿ ನೋಟಿಸು ನನ್ನ ತಾಯಿಗೆ ಜಾರಿಯಾಗಿತ್ತು ಎಂದರೆ ಸರಿಯಲ್ಲ. 1 ನೇ ವಾದಿಯು ಚಿಕ್ಕಮಗಳೂರಿನ ಡಿಸಿಸಿ ಬ್ಯಾಂಕಿನಲ್ಲಿ ಸಾಲ ಪಡೆದು, ಸದರಿ

ಹಣವನ್ನು ನನ್ನ ತಾಯಿ ಪ್ರತಿವಾದಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಹಣವನ್ನು ಮರು ಪಾವತಿಸುವ ಸಂಬಂಧ ನನ್ನ ತಾಯಿಯು ನಿಪಿ–1 ರಂತೆ ಕರಾರು ಪತ್ರವನ್ನು ಜಾರಿಗೊಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು ಮರು ಪಾವತಿಸಲು ತಪ್ಪಿದ್ದಲ್ಲಿ ತನ್ನ ಹಿಸ್ಸೆಯ 27 ಗುಂಟೆ ಸ್ವತ್ತನ್ನು 1 ನೇ ವಾದಿಯು ಪಡೆದುಕೊಳ್ಳಲು ನನ್ನ ತಾಯಿಯು ಸೂಚಿಸಿದ್ದರು ಎಂದರೆ ಸರಿಯಲ್ಲ.

ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಈ ದಾವೆ ಹೂಡಿರುವುದು ನನಗೆ ತಿಳಿಯಿತು. ನಿಪಿ–1 ಕರಾರು ಪತ್ರದಲ್ಲಿ ನನ್ನ ತಾಯಿಯ ಸಹಿ ಇಲ್ಲವೆಂದು ಯಾವುದೇ ಪ್ರಾಧಿಕಾರದಲ್ಲಿ ಪ್ರಶ್ನಿಸಿಲ್ಲ. ನನ್ನ ತಾಯಿ 1 ನೇ ವಾದಿಯಿಂದ ಹಣ ಪಡೆದಿದ್ದರೂ ಸಹ, ನಾನು ದುರುದ್ದೇಶ ಕುರಿತು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಮದುವೆ ಸಮಯದಲ್ಲಿ ಹಣ ನೀಡಿರುವುದಾಗಿ ಸುಳ್ಳು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು 1 ನೇ ವಾದಿಗೆ ಹಣ ನೀಡುವ ಬಾಧ್ಯತೆ ಹೊಂದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬರೆದುಕೊಟ್ಟಿರುವ ಕರಾರಿನ ಬಗ್ಗೆ ನನಗೆ ವಯುಕ್ತಿಕ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಅಸಲು ದಾವಾ ಸಂಖ್ಯೆ 139/2020

ಡಿ.ಡಬ್ಲ್ಯು:1

**_Sd/- 02.06.2026_**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.